ಯಾರಿಗೂ ದೊರಕದ ಉನ್ನತವಾದ ಒಂದು ಪ್ರಶಸ್ತಿ ನನ್ನನ್ನು ಅರಸಿ ಬಂದಿತ್ತು. ಅದೇ 'ನಾಟ್ಯ ಶಾರದಾಂಬಾಳ್' ಎಂಬ ಹತ್ತು ಲಕ್ಷ ನಗದಿನ ಪ್ರಶಸ್ತಿ. ಕೇವಲ ಗುರುಗಳಿಗೆ ಮಾತ್ರ ಕೊಡುವಂತಹುದು. ಫೋನಾಯಿಸಿ ಅಕಾಡೆಮಿಯವರು ಹೇಳಿದಾಗ 'ಸಂತೋಷ' ಎಂದಷ್ಟೇ ಹೇಳಿದ್ದೆ. ಅದಕ್ಕಾಗಿ ಕಾರ್ಯಕ್ರಮವಿದೆ ಎಂದಾಗ ಅದಕ್ಕೆ ಹೋಗಲು ಸಾಧ್ಯವಿಲ್ಲವೆಂದು ಕಾರಣ ಹೇಳಿದ್ದೆ. ಈಗ ಅದನ್ನು ತೆಗೆದುಕೊಂಡು ಕಮಿಟಿಯವರೇ ಮನೆಗೆ ಬರುತ್ತಿದ್ದಾರೆ ಎಂದು ತಿಳಿದಾಗ ಅದಕ್ಕಾಗಿ ಸಜ್ಜಾಗತೊಡಗಿದೆ. ನೃತ್ಯ ಅಭ್ಯಾಸಕ್ಕೆಂದೇ ಕಟ್ಟಿಸಲ್ಪಟ್ಟಿದ್ದ ವಿಶಾಲವಾದ ಹಾಲ್ ಅದು. ನನ್ನ ಮನೆ ಎನ್ನಬಹುದು. ಆದರೆ ನಿಜವಾಗಿ ಯಾರ ಮನೆ ಅದು? ದೊಡ್ಡ ಲೈಫ್ ಸೈಜ್ ಫೋಟೊ ಕಡೆಗೆ ನೋಡಿದೆ. ಅವರು ನನ್ನ ನೃತ್ಯಗುರು ಪೊನ್ನಂಬಾಳ್. ಫೋಟೊ ನೋಡಿ ಕಣ್ಣು ತುಂಬಿ ಬಂದಿತ್ತು. ಈ ಪ್ರಶಸ್ತಿ ಬೇಕೇ? ಅವರನ್ನೇ ಪ್ರಶ್ನಿಸಿದೆ. 'ನಿನ್ನ ಸಾಧನೆಗೆ ಸಮಾಜ ನೀಡುತ್ತಿರುವ ಕಾಣಿಕೆ ಅಲ್ಲವೇ?' ಎಂದು ಮರುತ್ತರ ಅಲ್ಲಿಂದ ಬಂದಿತ್ತು. ವಿಷಯ ತಿಳಿದ ಕೂಡಲೇ ನನ್ನ ಶಿಷ್ಯ ಶಿಷ್ಯೆಯರೆಲ್ಲ ಬಂದಿದ್ದರು. ಎಲ್ಲರೂ ಸೇರಿ ಬರುವವರನ್ನು ಸ್ವಾಗತಿಸಲು ಸಜ್ಜು ಮಾಡತೊಡತಿದ್ದರು. ಎಲ್ಲರಿಗೂ ಇದು ಅವರಿಗೇ ದೊರಕುತ್ತಿರುವ ಪ್ರಶಸ್ತಿ ಎಂಬ ಭಾವನೆ ಬಂದಿತ್ತು. ನನ್ನ ಗುರುಗಳು ನನಗೆ ತಿಳಿಸಿಕೊಟ್ಟ ವಿದ್ಯೆಯೂ ಅದೇ ಅಲ್ಲವೇ. ನೂರಕ್ಕೂ ಮೀರಿದ ಗುಂಪು ಅದು. ಜತೆಗೇ ಅವರ ತಾಯಿ, ತಂದೆಯರು. ಅವರೆಲ್ಲರ ಸಂಭ್ರಮದ ಓಡಾಟವನ್ನು ನೋಡುತ್ತಲೇ ಮೌನವಾಗಿ ಕುಳಿತೆ. ಅಂದು ಪುಟ್ಟ ಹಳ್ಳಿಯಾಗಿದ್ದು ಇಂದು ಅದು 'ನೃತ್ಯಗ್ರಾಮ'ವೇ ಆಗಿಬಿಟ್ಟಿತ್ತು. ಅಷ್ಟರಲ್ಲಿ ಮೂರು ನಾಲ್ಕು ವಾಹನಗಳು ಬಂದವು. ಸಂಜೆ ಇಳಿಯುವ ಹೊತ್ತು. ಹತ್ತು ಹದಿನೈದು ಮಂದಿ ಅಲ್ಲಿಂದ ಇಳಿದು ಬಂದರು. ಅವರೆಲ್ಲರ ಕೈಯಲ್ಲಿ ಪುಷ್ಪಗುಚ್ಛಗಳು. ನಾನು ಎಂದಿನಂತೆ ಮೌನವೇ. ಕೇವಲ ನೃತ್ಯ ತರಗತಿಯಲ್ಲಿ ಅಗತ್ಯವಿರುವಷ್ಟು ಮಾತ್ರ ತಿಳಿಸಿಕೊಡುತ್ತಾ ಮಾತನಾಡುವುದು ನನ್ನ ಅಭ್ಯಾಸವಾಗಿತ್ತು. ಲೌಕಿಕವಾದ ಯಾವುದೇ ಚರ್ಚೆಯಲ್ಲೂ ಪಾಲ್ಗೊಳ್ಳುತ್ತಲೇ ಇರಲಿಲ್ಲ. ಕುರ್ಚಿಯಲ್ಲಿ ಕುಳಿತ ನನಗೆ ಸನ್ಮಾನ ಮಾಡಲು ಬಂದಾಗ ಅದೆಲ್ಲವನ್ನೂ ಗುರುಗಳ ಫೋಟೊ ಬಳಿ ಇಡಲು ತಿಳಿಸಿದೆ. ಹಾರ, ಶಾಲು ಎಲ್ಲವನ್ನೂ ಗುರುಗಳಿಗೇ ಅರ್ಪಿಸಿದೆ. ಹಣದ ಚೆಕ್ ಅನ್ನು ಅವರಿಗೇ ಹಿಂತಿರುಗಿಸಿಬಿಟ್ಟೆ. ಅದರ ಸದುಪಯೋಗವನ್ನು ಅವರೇ ಮಾಡಿಕೊಳ್ಳಲಿ ಎಂದು. ಕೆಲವು ಫೋಟೊಗಳು ಕ್ಲಿಕ್ಕೆಂದವು. ಮೀಡಿಯಾಗಳು ವಿಡಿಯೊ ಮಾಡಿದವು. ಕೆಲವು ಪ್ರಶ್ನೆಗಳು 'ಈ ಪ್ರಶಸ್ತಿ ಏನೆನ್ನಿಸುತ್ತಿದೆ? ನಿಮ್ಮ ಸಾಮಾಜಿಕ ಜವಾಬ್ದಾರಿ ಹೆಚ್ಚಿತು ಅನ್ನಿಸುತ್ತಿದೆಯೇ? ತಮ್ಮ ಮುಂದಿನ ಗುರಿ ಏನು? ಈ ಸಾಧನೆಗೆ ನೀವು ಯಾರನ್ನು ನೆನಪಿಸಿಕೊಳ್ಳಲು ಇಷ್ಟಪಡುತ್ತೀರಿ?...' ನನ್ನ ಉತ್ತರ ಮುಗುಳ್ನಗೆ ಮತ್ತು ಫೋಟೊ ಕಡೆಗಿನ ನೋಟ ಅಷ್ಟೆ. ಮತ್ತೂ ಬಲವಂತ ಮಾಡಿ ಮಾತನಾಡಲು ಹೇಳಿದಾಗ 'ಈ ಬದುಕೇ ನನಗೆ ಪ್ರಶಸ್ತಿ. ಅದಕ್ಕಿಂತ ಬೇರೆ ಏನು ಬೇಕು?' ಎಂದೆ. ಅಡುಗೆಯವರಿಗೆ ಕರೆದು ಎಲ್ಲರಿಗೂ ಆತಿಥ್ಯ ನೀಡಿ ಕಳುಹಿಸಲು ಹೇಳಿದೆ. ಶಿಷ್ಯರಿಗೆ ಹೇಳಿದೆ ಗುರುಗಳ ಫೋಟೊ ಮೇಲೆ ಹಾಕಿರುವ ಹಾರವನ್ನು ಎಲ್ಲರಿಗೂ ಹಂಚಲು ಮತ್ತು ಹಾಗೇ ಹಣ್ಣುಗಳನ್ನು ಕೂಡ. ಮಾಧ್ಯಮದವರು ನನ್ನ ಶಿಷ್ಯರನೇಕರ ಬಳಿ ಮಾಹಿತಿಗಳನ್ನು ಸಂಗ್ರಹಿಸಿ ತೆಗೆದುಕೊಂಡು ಹೊರಟುಬಿಟ್ಟರು.